ಶ್ರೀ ಧರ್ಮಸಿಂಗ್.—ಜನತಾ ಮನೆಗಳನ್ನು ಕಟ್ಟಲಿಕ್ಕೆ ಹೊರಟಾಗ ಎಲ್ಲ ಕಡೆಯಿಂದ ಅನೇಕ ಎಡರು ತೊಡರುಗಳು ಬರುತ್ತವೆ. ೨೦ ಅಂಶಗಳ ಕಾರ್ಯಕ್ರಮದ ಪ್ರಕಾರ ಈಗ ಜಿಲ್ಲಾವಾರು ರೆವ್ಯೂ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಪೆಂಡಿಂಗ್ ಕೇಸುಗಳಿವೆ ಮತ್ತು ಎಲ್ಲೆಲ್ಲಿ ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ ಅದನ್ನೆಲ್ಲ ಸರ್ಕಾರ ಗಮನಕ್ಕೆ ತೆಗೆದುಕೊಂಡು ಸ್ಪಿಕ್ಟ್ ಆಗಿ ಇನ್ಸ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ.

Foreign exchange earned by the State Government.

113 SRI P. ANANDAKUNDA HEGDE (Brahmavar).—Will the Chief Minister be pleased to state.—

(a) the number of industries that are exporting industrial products to the Foreign Countries through the Karnataka State Industries ;

(b) the amount of foreign exchange earned by way to exports from these industries ?

SRI R. GUNDU RAO (Chief Minister).—

(a) 512.

(b) The exact statistical figures of Foreign Exchange value earned is not avilable. According to the Indian Currency the total value of exports amounts to Rs, 30,343,17 (in lakhs) for the year 1979–80.

ಶ್ರೀ ಪಿ. ಆನಂದಕುಂದ ಹೆಗ್ಡೆ.—ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ಖಚಿತವಾದ ಅಂಕಿ ಅಂಶಗಳು ಸಿಗುವುದಿಲ್ಲವೆಂದು ಮತ್ತು ೩೫ ಕೋಟಿ ರೂ. ನಿರ್ಯಾತವಾಗುತ್ತದೆಂದು ಹೇಳಿದ್ದೀರಿ. ವರ್ಷೇ ವರ್ಷೇ ನಿರ್ಯಾತವನ್ನು ಗುರುತಿಸುವುದಕ್ಕೆ ಖಚಿತವಾದ ಮಾಹಿತಿಯನ್ನು ಪಡೆಯುವ ಅವಶ್ಯಕತೆ ಇಲ್ಲವೆ? ಹಾಗೂ ನಿರ್ಯಾತವನ್ನು ಹೆಚ್ಚಿಸುವ ಬಗ್ಗೆ ರಾಜ್ಯ ಸರ್ಕಾರದ ನಿರ್ದಿಷ್ಟವಾದ ಕಾರ್ಯಕ್ರಮಗಳೇನು ಇವೆ ಎಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—೩೫ ಸಾವಿರ ಕೋಟಿ ಅಲ್ಲ, ೩೦೫ ಕೋಟಿ ಎಂದು ತಿದ್ದಬೇಕಾಗಿದೆ. ಏಕೆಂದರೆ, ಎಲ್ಲೋ ಮುದ್ರಣ ದೋಷವಾಗಿದೆ.

ಶ್ರೀ ಪಿ. ಆನಂದಕುಂದ ಹೆಗ್ಡೆ.—ನಿರ್ಯಾತವನ್ನು ಹೆಚ್ಚಿಸುವ ಅವಶ್ಯಕತೆ ಇದೆಯಲ್ಲವೆ ?

ಶ್ರೀ ಆರ್. ಗುಂಡೂರಾವ್.—ಖಂಡಿತ ಇದೆ.

ಶ್ರೀ ಪಿ. ಆನಂದಕುಂದ ಹೆಗ್ಡೆ.—ರಾಜ್ಯದ ಉತ್ಪಾದನೆಯನ್ನು ವಿದೇಶಗಳಿಗೆ ನಿರ್ಯಾತ ಮಾಡುವುದಕ್ಕೆ ರಾಜ್ಯ ಮಟ್ಟದ ಯೋಜನೆ ಇದೆಯೆ ?

ಶ್ರೀ ಆರ್. ಗುಂಡೂರಾವ್.—ಅದನ್ನು ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಮಾಡಬೇಕಾಗುತ್ತದೆ. ವಿದೇಶಗಳಿಗೆ ರಫ್ತು ಮಾಡತಕ್ಕದ್ದನ್ನು ಕೇಂದ್ರದ ಅನುಮತಿಗೆ ಒಳಪಟ್ಟು ಮಾಡಬೇಕಾಗುತ್ತದೆ.

ಶ್ರೀ ಪಿ. ಆನಂದಕುಂದ ಹೆಗ್ಡೆ.—ಖಚಿತವಾದ ಅಂಕಿ ಸಂಖ್ಯೆಗಳನ್ನು ಗುರುತಿಸಲು ಏನು ತೊಂದರೆ ಇದೆ ? ಮತ್ತು ಯಾವ ಕಾರಣಕ್ಕಾಗಿ ಇದು ಕಡಿಮೆಯಾಗುತ್ತದೆ ಎಂಬುದಕ್ಕೆ ಖಚಿತವಾದ ಅಂಕಿ ಅಂಶಗಳು ಬೇಕಾಗುತ್ತದೆ. ಆದ್ದರಿಂದ, ಇದನ್ನು ಸರ್ಕಾರ ಗಮನಿಸುತ್ತದೆಯೇ ?

ಶ್ರೀ ಆರ್. ಗುಂಡೂರಾವ್.—ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.